2017ರಲ್ಲಿ ಬರ್ಲಿನ್‌ನಲ್ಲಿ ನಡೆದ 67ನೆಯ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಈ ಚಿತ್ರ ಮೊದಲು ಪ್ರದರ್ಶನಗೊಂಡಿತು. ಕಳೆದ ವರ್ಷ ಗೋವಾ, ಕೋಲ್ಕತ್ತಾ, ಮುಂಬೈ, ದೆಹಲಿ, ತಿರುವನಂತಪುರ, ಬೆಂಗಳೂರು ಸೇರಿದಂತೆ ಭಾರತದಲ್ಲಿ ನಡೆದ ಹತ್ತಕ್ಕೂ ಹೆಚ್ಚು ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡು ಸಿನಿಮಾಸಕ್ತರ ಗಮನ ಸೆಳೆದಿದೆ.

ಡಮಾಸ್ಕಸ್‌ನ ಹಿಂಸಾಚಾರ ಪೀಡಿತ ಪ್ರದೇಶದ ಅಪಾರ್ಟ್‌ಮೆಂಟ್ ಒಂದರಲ್ಲಿ ಕೆಲ ಗಂಟೆಗಳ ಅವಧಿಯಲ್ಲಿ ನಡೆಯುವ ನಾಟಕೀಯ ಘಟನೆಗಳ ತೆಳು ಹಂದರದ ಭಾವುಕ ಕಥಾ ಚಿತ್ರ ಇನ್‌ಸಿರಿಯೇಟೆಡ್.

ಮನೆಯ ಒಡತಿ ಯಾಝುನ್, ಅವಳ ಇಬ್ಬರು ಹದಿಹರೆಯದ ಹೆಣ್ಣುಮಕ್ಕಳು, ಒಬ್ಬ ಮಗ, ವೃದ್ಧ ಮಾವ, ಮನೆ ಕೆಲಸದಾಕೆ, ಇನ್ನೊಬ್ಬ ಹುಡುಗ ಹಾಗೂ ನೆರೆಮನೆಯ ಹಲಿಮಾ ಎಂಬ ಯುವತಿ ಮತ್ತವಳ ಕೈಕೂಸು ಸೇರಿ ಒಂಬತ್ತು ಜನ ಮನೆಯಲ್ಲಿದ್ದಾರೆ. ಹಲಿಮಾ ಮತ್ತವಳ ಗಂಡ ಡಮಾಸ್ಕಸ್ ತೊರೆಯುವ ಆಲೋಚನೆಯಲ್ಲಿದ್ದಾರೆ. ಅದರ ಸಿದ್ಧತೆಗಾಗಿ ಗಂಡ ಬೆಳಗಿನ ಮಬ್ಬುಗತ್ತಲಲ್ಲಿ ಮನೆಯಿಂದ ಹೊರ ಬೀಳುತ್ತಾನೆ. ಕೆಲವೇ ಕ್ಷಣಗಳಲ್ಲಿ ಅವನಿಗೆ ಗುಂಡೇಟು ಬೀಳುತ್ತದೆ. ಮನೆ ಅಂಗಳದಲ್ಲೇ ಕುಸಿದುಬೀಳುತ್ತಾನೆ. ಈ ಘಟನೆಯನ್ನು ಕೆಲಸದಾಕೆ ದೆಲ್ಹಾನಿ ನೋಡುತ್ತಾಳೆ. ನಂತರ ಅದು ಯಾಝುನ್‌ಗೆ ಗೊತ್ತಾಗುತ್ತದೆ. ಹೆದರಿದ ಅವಳು ಮನೆಯ ಬಾಗಿಲು, ಕಿಟಕಿಗಳನ್ನು ಭದ್ರಪಡಿಸಿ ಮನೆಯ ಸದಸ್ಯರನ್ನು ಒಂದು ಕೋಣೆಯಲ್ಲಿ ಕೂರಿಸಿ ಸದ್ದಾಗದಂತೆ ನೋಡಿಕೊಳ್ಳುತ್ತಾಳೆ. ಮನೆಯ ಸಮೀಪವೇ ನಡೆಯುವ ಮಿಷನ್ ಗನ್‌ಗಳ ಗುಂಡಿನ ದಾಳಿ. ದೂರದಿಂದ ಕೇಳಿ ಬರುವ ನಿರಂತರ ಗುಂಡಿನ ಸದ್ದು. ಆಗಾಗ ಯಾರೋ ಬಾಗಿಲು ಬಡಿಯುತ್ತಾರೆ. ಅಪಾರ್ಟ್‌ಮೆಂಟಿನ ಛಾವಣಿ ಮೇಲೆ ಯಾರೋ ಓಡಾಡುವ ಸದ್ದು... ಮನೆಯೊಳಗಿದ್ದವರಲ್ಲಿ ಭಯ, ಆತಂಕ ಹೆಚ್ಚುತ್ತ ಹೋಗುತ್ತದೆ. ಬಾಗಿಲು ತೆಗೆಯುವಂತೆ ಆಗಾಗ ಯಾರೋ ಒತ್ತಾಯಿಸುತ್ತಾರೆ. ಕೆಲ ಕ್ಷಣಗಳ ಮೌನ. ಬಾಗಿಲು ಬಡಿದವರು ದೂರ ಹೋದ ಮೇಲೆ ಯಾಝುನ್ ಮತ್ತು ದೆಲ್ಹಾನಿ ಕಿಟಕಿ ಪರದೆ ಸರಿಸಿ ಅಂಗಳದಲ್ಲಿ ಬಿದ್ದಿರುವ ಹಲಿಮಾಳ ಗಂಡನ ಸ್ಥಿತಿ ಗಮನಿಸುತ್ತಾರೆ.

ಯಾಜನ್‌ಳ ವೃದ್ಧ ಮಾವ ತನ್ನೊಳಗಿನ ಒತ್ತಡ ನಿವಾರಣೆಗೆ ಒಂದರ ಮೇಲೊಂದು ಸಿಗರೇಟು ಸೇದುತ್ತ ಮನೆಯೊಳಗೆ ಉಸಿರಾಡಲೂ ಆಗದಂತಹ ವಾತಾವರಣ ನಿರ್ಮಿಸುತ್ತಾನೆ. ಭಯದ ನಡುವೆಯೇ ದೆಲ್ಹಾನಿ ಅಡಿಗೆ ಸಿದ್ಧತೆ ಮಾಡುತ್ತಾಳೆ. ಇಕ್ಕಟ್ಟಿನ ಅಡಿಗೆ ಕೋಣೆ ಹಾಗೂ ಮನೆಯ ಹಜಾರಕ್ಕೆ ಎಲ್ಲರೂ ಆಗಾಗ ಸ್ಥಳಾಂತರವಾಗುತ್ತ, ಉಸಿರುಗಟ್ಟುವ ಪರಿಸರದಲ್ಲಿ ಕೂತು, ನಿಂತು ಕಳೆಯುತ್ತಾರೆ. ಮಕ್ಕಳಿಗೆ ಇದು ಮೋಜಿನ ವಿಷಯ. ದೊಡ್ಡವರಿಗೆ ಆತಂಕದ ಸಂಗತಿ. ಇಕ್ಕಟ್ಟಿನ ಜಾಗದಲ್ಲಿ ಹಲವು ಜನರ ಒಟ್ಟಿಗೆ ಕಳೆಯುವಂತಹ ಸ್ಥಿತಿಗೆ ಕ್ಲಸ್ಟ್ರೊಫೋಬಿಯಾ ಎನ್ನುತ್ತಾರೆ. ಮನೆಯೊಳಗಿನ ಜನ ಈ ಬಗೆಯ ಫೋಬಿಯಾಗೆ ಒಳಗಾಗುತ್ತಾರೆ. ಈ ಅನುಭವವನ್ನು ನಿರ್ದೇಶಕ ಫಿಲಿಪ್ ಚಿತ್ರ ನೋಡುಗರಿಗೂ ದಾಟಿಸುತ್ತಾರೆ.

ಕೊನೆಗೆ ದಾಳಿಕೋರರು ಬಾಗಿಲು ಮುರಿದು ಒಳ ಬರುತ್ತಾರೆ. ಹಲಿಮಾ ಮತ್ತವಳ ಮಗು ಅವರ ಕಣ್ಣಿಗೆ ಬೀಳುತ್ತಾರೆ. ಅಡಿಗೆ ಮನೆಯಲ್ಲಿ ಅಡಗಿದ್ದ ಯಾಝುನ್ ಕುಟುಂಬದವರನ್ನು ಮುಖ್ಯವಾಗಿ ಅವಳ ಇಬ್ಬರು ಹೆಣ್ಣುಮಕ್ಕಳನ್ನು ರಕ್ಷಿಸಲು ಹಲಿಮಾ ಮನೆಯಲ್ಲಿ ಯಾರೂ ಇಲ್ಲವೆನ್ನುತ್ತಾಳೆ. ಮುಂದಿನದು ಅವಳ ದುರಂತ. ದಾಳಿಕೋರರ ಮುಖಂಡ ಹಲಿಮಾಳ ಮೇಲೆ